RegdNo B G 155 Sn (126)2 6—7—1965

ಸತ್ಯವಾದಿ

48thYear
Satyavadi
DAILY
MYSORE 4

ಸಂಸ್ಥಾಪಕರು – ರಾ.ಸಾ. ಸರಿಸ್ತೇದಾರ್ ಎಂ ಪಿ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ. ಎಸ್ ಕೃಷ್ಣರಾವ್ 2

ಹೇಗ್ ವಿಶ್ವ ನ್ಯಾಯಾಲಯದ ಸ್ತುತ್ಯ ಧ್ಯೇಯ

ನೋಡಲು ಅಂತಹುದೇನೂ ಆಕರ್ಷಕವಲ್ಲದ ಕಟ್ಟಡದಲ್ಲಿದ್ದರೂ ತನ್ನದೇ ಆದ ದೀಪ್ತಿಯಿಂದ ಬೆಳಗುತ್ತಾ, ಹಾಲೆಂಡ್ ಎಂಬ ಹೆಸರನ್ನು ಉಚ್ಚರಿಸಿದೊಡನೆ ವಿಶ್ವವೇ ಅದರತ್ತ ಮರ್ಯಾದೆಯಿಂದ ದೃಷ್ಟಿ ಹೊರಳಿಸುವಂತೆ ಮಾಡಿರುವುದೆಂದರೆ ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯವೆಂದು ಹಾಲೆಂಡಿನ ಬಗ್ಗೆ ತಿಳಿದ ಯಾರಾದರೂ ಹೇಳಬಹುದು. ಶಾಂತಿದೇವತೆಯ ಆವಾಸಸ್ಥಾನವೇ ಅದೆಂದು ಹಲವರ ನಂಬುಗೆ. ಹೇಗ್ ಸಂದರ್ಶಕರಾರೂ ಈ ನ್ಯಾಯದೇವತೆಯ ಪ್ರಶಾಂತ ಮಂದಿರಗಳನ್ನೂ, ಸುತ್ತಲಿನ ವನಶ್ರೀ ಸಂಪದದಿಂದ ಕೂಡಿದ ಆವರಣಗಳನ್ನೂ ಸಂದರ್ಶಿಸದೇ ಬರುವುದಿಲ್ಲ.

' ನ್ಯಾಯಸೂರ್ಯನ ಕಿರಣಗಳು ಸದಾ ನಮ್ಮ ಮೇಲಿರಲಿ ! ' ಎಂಬರ್ಥ ಬರುವ ವಾಕ್ಯವು ನ್ಯಾಯಾಲಯದ ಮಹಾದ್ವಾರದ ಮೇಲೆ ವಿಜೃಂಭಿಸುತ್ತಿದೆ ; ನೋಟಕರು ಸ್ತಂಭೀಭೂತರಾಗಿ ನಿಲ್ಲುವಂತೆ ಮಾಡುತ್ತದೆ : ಬರುವ ಪ್ರವಾಸಿಗಳೆಲ್ಲಾ ಈ ನ್ಯಾಯಮಂದಿರದಲ್ಲಿ ನಡೆಯುತ್ತಿರುವ ಮೊಕದ್ದಮೆಗಳನ್ನು ನೋಡಬಹುದು ; ಹದಿನೈದು ವಿವಿಧ ದೇಶಗಳ ನ್ಯಾಯಾಧೀಶರು ಆಢ್ಯತೆಯಿಂದ ಇಲ್ಲಿ ಕುಳಿತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ !

ಹೇಗ್‌ನಲ್ಲಿ ಅಂತರ್ರಾಷ್ಟ್ರೀಯ ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ತೋರಿದ್ದು 1899 ರಲ್ಲಿ. ರಷ್ಯಾದ ಜಾರ್ ಚಕ್ರವರ್ತಿ ಎರಡನೇ ನಿಕೋಲಸನ ಆದೇಶದಂತೆ ಹಾಲೆಂಡಿನ ರಾಣಿ ವಿಲ್ಹೆಲ್ಮಿನಾ ಹೇಗಿನಲ್ಲಿ ಪ್ರಥಮ ಶಾಂತಿ ಸಮ್ಮೇಳನವನ್ನು ಕರೆದು ಕೇಳಿಕೊಂಡುದರ ಫಲವಾಗಿ ಸ್ಕಾಟ್ಲೆಂಡಿನ ನೇಯ್ಗೆಯವನೊಬ್ಬನ ಮಗ ಆಂಡ್ರ್ಯೂ ಕಾರ್ನಗಿ ನ್ಯಾಯಮಂದಿರದ ಸ್ಥಾಪನೆಗಾಗಿ 15 ಲಕ್ಷ ಡಾಲರುಗಳನ್ನು ನೀಡಿದನು ; ನೆದರ್ಲ್ಯಾಂಡು ಸರಕಾರವು ಉದ್ಯಾನ ಹಾಗೂ ನಿವೇಶನಗಳನ್ನು ನೀಡಿತು : ಸಾಮಾನ್ಯವಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳೂ ನ್ಯಾಯಮೂರ್ತಿಯ ಈ ವಾಸಗೃಹವನ್ನು ಹೆಚ್ಚು ಸುಂದರವಾಗಿ ಕಾಣುವಂತೆ ಮಾಡಲು ಬೇಕಾದ ವಸ್ತುಗಳನ್ನು ನೀಡಿ ಸಹಕರಿಸಿದರು.

ಈ ನ್ಯಾಯಾಲಯವು ಅಂತರರಾಷ್ಟ್ರೀಯ ಕಲೆಯ ಪ್ರತೀಕವಾಗಿಯೂ ನಿಂತಿದೆ : ಈ ನ್ಯಾಯದೇವತೆಯ ಮುಂದಿನ ಕಂಚಿನ ಮಹಾದ್ವಾರಗಳು ಬೆಲ್ಜಿಯಮ್ಮಿನ ಕೊಡುಗೆ : ನ್ಯಾಯಾಲಯದ ಕಿಟಕಿ ಹಾಗೂ ಅದರ ಗಾಜುಗಳು ಬ್ರಿಟನ್ನಿನಿಂದ ಬಂದವು ; ಹೀಗೆಯೇ ಫ್ರಾನ್ಸ್, ಪೋರ್ಚುಗಲ್, ಡೆನ್ಮಾರ್ಕ್, ಸ್ವಿಟ್ಜರ್ಲೆಂಡು, ರಷ್ಯ, ನೆದರ್ಲ್ಯಾಂಡ್ಸ್ ಅಮೇರಿಕಾ, ಟರ್ಕಿ, ಜರ್ಮನಿ, ಸ್ವೀಡನ್ ನಾರ್ವೆ ಮುಂತಾದ ದೇಶಗಳೆಲ್ಲಾ ಒಂದಲ್ಲೊಂದು ವಸ್ತುಗಳನ್ನು ಈ ನ್ಯಾಯಮಂದಿರಕ್ಕೆ ಕಳುಹಿಸಿಕೊಟ್ಟಿವೆ.

ನಿಜಕ್ಕೂ ಪವಾಡವೋ ಎಂಬಂತೆ ಅಚ್ಚರಿಪಡುವಂತೆ, ಎರಡನೇ ಮಹಾಯುದ್ಧದಲ್ಲಿ ಸಹಾ ಸುತ್ತಮುತ್ತಲೆಲ್ಲಾ ಬಾಂಬಿನ ಧಾಳಿ ನಡೆದಿದ್ದರೂ ಈ ನ್ಯಾಯಾಲಯದ ಒಂದೇ ಒಂದು ಹೆಂಚು ಸಹಾ ಘಾಸಿಗೊಳ್ಳಲಿಲ್ಲ.

ನನ್ನ ಮನಸ್ಸಾಕ್ಷಿಗೆ ಕಿಂಚಿತ್ತೂ ವ್ಯತ್ಯಯ ಬರದಂತೆ ನಾನು ನಿಷ್ಪಕ್ಷವಾಗಿ

(ಹಿಂದಿನ ಪುಟದಲ್ಲಿ ಮುಂದುವರಿದಿದೆ)

ಜಡ್ಜರ ಸಂಬಳ ಹೆಚ್ಚಿತು

ಬ್ರಿಟನ್ನಿನ 98 ಹೈಕೋರ್ಟ್ ಜಡ್ಜರ ಸಂಬಳ ಶೇಕಡ 25 ಹೆಚ್ಚಿತು – ಪ್ರೊಬೇಟು ಮತ್ತು ಡೈವರ್ಸ್ ಜಡ್ಜರ ಸಂಬಳ ವರ್ಷಕ್ಕೆ 11250 ಪೌಂಡುಗಳಿಗೆ ಹೆಚ್ಚಿತು : ನ್ಯಾಯ ಇಲಾಖಾ ಮುಖ್ಯಸ್ಥ ಲಾರ್ಡ್ ಛಾನ್ಸಲರ ಸಂಬಳ ವರ್ಷಕ್ಕೆ 14500 ಪೌಂಡುಗಳಾಗುವುದು

ಸ್ವಿಂಗಿಂಗ್ ಬ್ರಿಡ್

ಸ್ಯಾನ್ ಫ್ರಾನ್ಸಿಸ್ಕೋವಿನ ಗೋಲ್ಡನ್ ಗೇಟ್ ಸೇತುವೆಯು ಪ್ರಪಂಚದ ಅತ್ಯಂತ ಭಾರದ ತೂಗು ಸೇತುವೆ ಆಗಿದೆ. ಈಗ ಅದಕ್ಕೆ ದೊಡ್ಡದಾಗಿ ಸ್ಟೇಟನ್ ದ್ವೀಪದಿಂದ ಬ್ರೂಕ್ಲಿನ್‌ಗೆ 13700 ಅಡಿ ಉದ್ದದ ಸೇತುವೆ ಕಟ್ಟಲಾಗಿದೆ ಇಟಲಿಯ ಮೆಸೀನ ಭೂಶಿರದಿಂದ ಸಿಸಿಲಿಗೆ 5 ಸಾವಿರ ಅಡಿ ಉದ್ದದ ಸೇತುವೆ ಕಟ್ಟಲು ಯೋಚಿಸಲಾಗುತ್ತಿದೆ ಜಪಾನಿನ ಅಕಾಶಿ ಭೂಶಿರದ ಮೇಲೆ ಅಷ್ಟೆ ಉದ್ದವಾದ ಸೇತುವೆ ನಿರ್ಮಿಸಲು ಯೋಚಿಸಲಾಗುತ್ತಿದೆ.

═

ಗರ್ಭ ನಿರೋಧವು ವಿವಾಹದ ಆದರ್ಶಕ್ಕೆ ವಿರೋಧವೆಂದು ಕೆಲವರು ಅಭಿಪ್ರಾಯಪಟ್ಟಿರುವರು

ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರದಲ್ಲಿ ನಿರ್ಲಕ್ಷಿಸ ಕೂಡದೆಂದು ಮೈಸೂರು ಸರಕಾರ ಕೇಂದ್ರದೊಡನೆ ಭದ್ರವಾದ ನಿಲುವನ್ನು ಹೊಂದಿದೆ

ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನ ಅಲ್ಲಿನ ಕಾಂಗ್ರೆಸಿಗೆ ಸೇರಿರುವುದರಿಂದ ಈಗ ಅಲ್ಲಿ ಕಾಂಗ್ರೆಸು ಬಲವಾಗಿರುವದಾಗಿ ಕೇಂದ್ರ ಗೃಹ ಮಂತ್ರಿ ಶ್ರೀ ನಂದಾರವರು ತಿಳಿಸಿದರು

ನೇತಾಜಿ ಸುಭಾಷರ ಕುಮಾರಿ ಅನಿತಾ ಬೋಸರು ನಿನ್ನೆ ಅಮೇರಿಕಾ ಪ್ರೊ|| ಮಾರ್ಟಿನ್ ಫಾಫರನ್ನು ವಿವಾಹವಾಗುವ ವಿಚಾರವಿದ್ದಿತೆಂದು ವಿಯನ್ನ ವಾರ್ತೆ.

ಎಲ್ಲೆಲ್ಲಿ -ಏನೇನು

ಅಮೇರಿಕಾವು ವಿಯಟ್ನಾಂ ಯುದ್ಧದಲ್ಲಿ ಟಾಕ್ಸಿಕ್ ಗ್ಯಾಸ ಉಪಯೋಗಿಸುತ್ತಿದೆಯೆಂದು ಚೀಣಾ ನಿಂದಿಸಿದೆ.

ಭಾರತ ಸರ್ಕಾರದ ಆಸ್ಪತ್ರೆಗಳಲ್ಲಿ ನರ್ಸಿಂಗು ನೌಕರರಿಗೆ ತುಟ್ಟಿ ಭತ್ಯ ಹೆಚ್ಚಿಸಲಾಗಿದೆ

ನಾಲ್ಕನೆಯ ಯೋಜನೆಯಲ್ಲಿ ವೃದ್ಧ ವಿರಾಮ ವೇತನ ಖಂಡಿತವೆಂದು ನವದೆಹಲಿ ವಾರ್ತೆ

ಮೈಸೂರು ದಸರಾ ವಿಧಿವತ್ತಾಗಿ ಸೆಪ್ಟೆಂಬರು 26 ರಿಂದ ಅಕ್ಟೋಬರು 5 ರ ವರೆಗೆ ನಡೆಯುವದು ವಿಜಯದಶಮಿಯಂದು ಮೈಸೂರು ಮಹಾರಾಜರವರ ನೇತ್ರಾನಂದಕರ ಜಂಬೂಸವಾರಿ ಮಹೋತ್ಸವ ನಡೆಯುವುದು

ಅಲ್ಪಸಂಖ್ಯಾತರ ಆಸ್ತಿ ಮೇಲಿನ ಸುಗ್ರೀವಾಜ್ಞೆಯು ನ್ಯಾಯಬಾಹಿರವೆಂದು ಢಾಕಾ ಹೈಕೋರ್ಟ್ ತೀರ್ಪಿತ್ತಿದೆ

ಕಿಯೂಷುವಿನಲ್ಲಾದ ಭೀಕರ ಮಳೆಯಿಂದ ಹದಿನೆಂಟು ಮಂದಿ ಮರಣ ಹೊಂದಿ ಇಪ್ಪತ್ತು ಮಂದಿ ಗಾಯಗೊಂಡರೆಂದು ಟೋಕಿಯೋ ವಾರ್ತೆ

ಹಿಂದಿಯ ಬಗ್ಗೆ ಜನತೆಯ ಅಭಿಪ್ರಾಯ ತಿಳಿಯಲು ರೆಫರೆಂಡಂಗೆ ಕಾಂಗ್ರೆಸಿನ ಅಧ್ಯಕ್ಷರಾದ ಕಾಮರಾಜರು ಒಪ್ಪುವರೆ ಎಂದು ಡಿ ಎಂ ಕೆ ನಾಯಕರಾದ ಅಣ್ಣಾದೊರೈ ಕರೈಕುಡಿಯಲ್ಲಿ ತಿಳಿಸಿದರು

ಕೊಲಂಬೊ— ಭಾರತದಲ್ಲಿ ಆಮದಿನ ಮೇಲೆ ತೀವ್ರ ಹತೋಟಿ ಇರುವುದರಿಂದ, ಭಾರತಕ್ಕೆ ಸಿಲೋನಿನ ರಫ್ತು ಕಣ್ಣಗಾಗಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸ: ಸಂವರಂಡ
7 ಬುಧವಾರ ನವಮಿ ಚಿತ್ತ

7 8 8-7-65

ವರ್ತಿಸುತ್ತೇನೆಂದು ಪ್ರಮಾಣವನ್ನು ಸ್ವೀಕರಿಸುತ್ತೇನೆ— ಎಂದು ನ್ಯಾಯಮೂರ್ತಿಗಳು ಮೊದಲು ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆ.

ಕೇವಲ ಅಂತರ ರಾಷ್ಟ್ರೀಯ ತಕರಾರುಗಳನ್ನು ಮಾತ್ರವೇ ಅಲ್ಲದೆ ಅನೇಕ ಸ್ವಾರಸ್ಯಕರವಾದ ಮೊಖದ್ದಮೆಗಳಲ್ಲಿಯೂ ತೀರ್ಪಿತ್ತಿದ್ದಾರೆ.

ಕಾರ್ನೆಗಿ ಪುಸ್ತಕ ಭಂಡಾರ ಜಗತ್ತಿನಲ್ಲಿ ಅತಿ ಸಮೃದ್ಧವಾದ ನ್ಯಾಯ ಶಾಸ್ತ್ರ ಪುಸ್ತಕಗಳನ್ನು ಹೊಂದಿರುವ ಭಂಡಾರಗಳಲ್ಲೊಂದಾಗಿದೆ ; ನ್ಯಾಯ ಶಾಸ್ತ್ರಕ್ಕೆ ಸಂಬಂಧಿಸಿದಂತೆಯೇ 2500000 ಪುಸ್ತಕಗಳಿವೆ.

ನಿಮ್ಮ ನಿಮ್ಮ ನಡುವೆ ಬರುವ ವೈಮನಸ್ಯಗಳನ್ನು ಶಾಂತಿಯಿಂದ ಪರಿಹರಿಸಿಕೊಳ್ಳಿ— ಎಂದು ಸಕಲ ದೇಶಗಳಿಗೂ ಈ ಅಂತರರಾಷ್ಟ್ರೀಯ ನ್ಯಾಯಮಂದಿರವು ಸಂದೇಶವನ್ನು ಸಾರುತ್ತಿದೆ : ನ್ಯಾಯ ಸೂರ್ಯನ ಕಿರಣಗಳು ಸದಾ ನಮ್ಮ ಮೇಲಿರಲಿ ಎಂಬುದಕ್ಕಾಗಿ ಅನವರತವೂ ಶ್ರಮಿಸುತ್ತಿದೆ !

*

ಸಮಯೋಚಿತ ಸೂಕ್ತಿಗಳು

ಯಾವನಿಗೆ ಸ್ವಯಂಪ್ರಜ್ಞೆ (ಸ್ವತಃಬುದ್ಧಿ) ಇಲ್ಲವೋ ಅವನಿಗೆ ಶಾಸ್ತ್ರದಿಂದೇನು ಪ್ರಯೋಜನ ? ಕಣ್ಣುಗಳೇ ಇಲ್ಲದವನಿಗೆ ಕನ್ನಡಿಯು ಏನು ಮಾಡೀತು ?

—0—

ನಾಳೆ ಪತ್ರಿಕೆಗೆ ರಜವಿದೆ



ರಷಿಯಾದ ಕಟ್ಟಡ



ಗೋರಕ್ಷಣೆ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharma prachara ni athe
(M S Krishna Rao) Proprietor) at the Satyavadi Press
Chamarajapuram, Mysore 4

ವುಡ್‌ಲ್ಯಾಂಡ್ಸ್ ತೇಜಸ್ವಿ 7 ನೇ ವಾರ

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಜಾನ್‌ವರ್ ❁ JANWAR

ಪ್ರೇಕ್ಷಕರಿಂದ ಪ್ರಶಂಸಿಸಲ್ಪಡುತ್ತಾ ಯಶಸ್ವಿಯಾಗಿ ನಡೆಯುತ್ತಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಆಪೆರ— ಜನಭರಿತ 2 ನೇ ವಾರ

❁ ವಲ್ಲವನಕ್ಕು ವಲ್ಲವನ್ ❁

ಮಾಡರ್ನ್ ಥಿಯೇಟರ್ಸ್‌ರವರ 100 ನೇ ಅಮೋಘ ತಮಿಳು ಚಿತ್ರ
ನಟವರ್ಗ— ಜೆಮಿನಿ ಗಣೇಶನ್, ಸಾವಿತ್ರಿ, ಅಶೋಕನ್, ತಂಗವೇಲು
ಮುತ್ತುಲಕ್ಷ್ಮಿ, ಮನೋರಮ

ಶಕ್ತಿ ಸುಧಾ

ಉತ್ತಮ ಟಾನಿಕ್

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Help The GORAKSHANA

…. …. ಗೋರಕ್ಷಣಕ್ಕೆ ಬೆಂಬಲ ನೀಡಿ …. ….

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ
ವಿಭಾಗಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ
ವಾರ್ಷಿಕ ಚಂದಾ 50 ಪೈಸೆ ಸಹಾಯಕರು ರೂ 10 ಮತ್ತು ಬೆಂಬಲಿಗರು ರೂ 25
(ಒಂದು ಸಾರಿ ಮಾತ್ರ) ;
ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಸಂತೋಷಪೂರ್ವಕವಾಗಿ ಸ್ವೀಕರಿಸಲಾಗುವುದು
ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ ಮೈಸೂರು 4